**ಸಚಿನ್ ಅದ್ಭುತ ಬ್ಯಾಟಿಂಗ್ ಭಾರತದ ಮಾನ ಬಚಾವ್**

(೨೫ ವರ್ಷಗಳ ಮುಂದೆ)

ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯ ಕೊನೆಯ ಪಂದ್ಯದಲ್ಲಿ ಭಾರತ ಮಾಲ್ಡೀವ್ಸ್‌ನ ವಿರುದ್ಧ, ಒಂದು ವಿಕೆಟ್‌ನ ಅನಿರೀಕ್ಷಿತ ಗೆಲುವನ್ನು ಸಾಧಿಸಿದೆ. ಮಾಲ್ಡೀವ್ಸ್ ಇತ್ತೀಚೆಗಷ್ಟೇ ಅಂತಾರಾಷ್ಟ್ರೀಯ ಕ್ರಿಕೆಟ್ ಆಡಲು ಸೇರ್ಪಡೆಯಾಗಿತ್ತು. ಭಾರತ ಈ ಪಂದ್ಯಾವಳಿಯಲ್ಲಿ ಆಡಿದ ಎಂಟು ಪಂದ್ಯಗಳ ಪೈಕಿ ಏಳರಲ್ಲಿ ಸೋತು ಒಂದರಲ್ಲಿ ಗೆದ್ದಿದೆ. ಈ ಗೆಲುವಿನಿಂದ ಎರಡು ಪಾಯಿಂಟ್ ಗಳಿಸಿದ ಭಾರತ ಪೂಲ್ 'ಸಿ' ಗುಂಪಿನಲ್ಲಿ ಕೊನೆಯ ಸ್ಥಾನ ಪಡೆದಿದೆ. ಭಾರತ ತಂಡ ಆಡಿದ ಪೂಲ್ 'ಸಿ' ಗುಂಪಿನಲ್ಲಿ ದ.ಆಫ್ರಿಕಾ, ಬಾಂಗ್ಲಾದೇಶ ಮುಂತಾದ ಪ್ರಬಲ ತಂಡಗಳು ಸೇರಿದ್ದವು. ತಾನು ಆಡಿದ ಪಂದ್ಯಗಳೆಲ್ಲವನ್ನೂ ಗೆದ್ದು ಅಗ್ರಸ್ಥಾನ ಪಡೆದ ದ.ಆಫ್ರಿಕಾ ತಂಡ ಸೆಮಿಫೈನಲ್ ತಲುಪಿದೆ. ಸೆಮಿಫೈನಲ್ ತಲುಪಿರುವ ಇನ್ನಿತರ ತಂಡಗಳೆಂದರೆ ಪೂಲ್ 'ಎ'ನಿಂದ ಆಸ್ಟ್ರೇಲಿಯಾ ಪೂಲ್ 'ಬಿ'ನಿಂದ ಜಿಂಬಾಬ್ವೆ ಹಾಗೂ ಪೂಲ್ 'ಡಿ' ನಿಂದ ಶ್ರೀಲಂಕಾ. ಇತ್ತೀಚೆಗಷ್ಟೇ ಮುಕ್ತಾಯವಾದ ಬೆನ್ಸನ್ ಅಂಡ ಹೆಜಸ್ ವಿಶ್ವ ಸರಣಿಯಲ್ಲಿ ಟ್ರೋಫಿ ಗೆದ್ದುಕೊಂಡ ದ.ಆಫ್ರಿಕಾ ತಂಡ ವಿಶ್ವಕಪ್ ಗೆಲ್ಲುವುದಕ್ಕೆ ನೆಚ್ಚಿನ ತಂಡವಾಗಿದೆ.

ಭಾರತದ ತಂಡದ ಈ ವಿಜಯಕ್ಕೆ ೪೩ ವರ್ಷದ ಅನುಭವೀ ಆಟಗಾರ ಸಚಿನ್ ತೆಂಡೂಲ್ಕರ್ ರೂವಾರಿಯಾದರು. ಅವರು ಕೇವಲ ೮೦ ಬಾಲ್ ಗಳಲ್ಲಿ ೪೦ ರನಗಳನ್ನು ಗಳಿಸಿ ಔಟಾದರೆ ಉಳಿದು, ಭಾರತ ೯ ವಿಕೆಟ್ ಗೆ ೧೨೩ ರನ್ ಗಳಿಸುವುದಕ್ಕೆ ಸಹಕಾರಿಯಾದರು. ಇದಕ್ಕೆ ಮುನ್ನ ಮಾಲ್ಡೀವ್ಸ್ ತನ್ನ ೫೦ ಓವರಗಳಲ್ಲಿ ೮ ವಿಕೆಟ್ ಗೆ ೧೨೨ ರನ್ ಗಳಿಸಿತ್ತು.

ಭಾರತದ ಈ ವಿಜಯವು, ಹತ್ತು ವರ್ಷಗಳ ದೀರ್ಘಕಾಲದ ಸೋಲಿನ ಸರಪಳಿಯನ್ನು ಮುರಿದಂತಾಗಿದೆ. ಭಾರತದ ಕ್ರಿಕೆಟ್ ತಂಡದ ಸಾಧನೆಯನ್ನು ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಸಂಜಯ್ ಮಂಜ್ರೇಕರ್ ಹಾಗೂ ಕ್ರೀಡಾ ಮಂತ್ರಿ ಮನಃಪೂರ್ವಕವಾಗಿ ಪ್ರಶಂಸಿಸಿದ್ದಾರೆ. ಮಾಜಿ ಕ್ರಿಕೆಟ್ ನಾಯಕರಾಗಿದ್ದ ಮಂಜ್ರೇಕರ್‌ರವರು ತಮ್ಮ ಸಂದೇಶದಲ್ಲಿ "ಸುಮಾರು ೩೦ ವರ್ಷಗಳ ಹಿಂದೆ ಕ್ರಿಕೆಟ್ ಆಟದಲ್ಲಿ ಪ್ರಭುತ್ವ ಪಡೆದಿದ್ದ ಭಾರತ ಅದನ್ನು ಮತ್ತೆ ಗಳಿಸುವಲ್ಲಿ ಈ ವಿಜಯ ನಾಂದಿಯಾಗಲಿ" ಎಂದು ಆಶಿಸಿದ್ದಾರೆ.

Nov 21st 1991    Kannada Prabha        Sachin Adhbuta  Byaating Bharatada Maana Bachav